ಬೆಂಗಳೂರಿನಲ್ಲಿ ಬಾಡಿಗೆಯಲ್ಲಿರುವ ಸರ್ಕಾರಿ ಕಟ್ಟಡಗಳ ಸಂಖ್ಯೆ

3134 - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನಲ್ಲಿ ಬಾಡಿಗೆ ಕಟ್ಟಡದಲ್ಲಿರುವ ಸರ್ಕಾರಿ ಕಛೇರಿಗಳ ಸಂಖ್ಯೆ ಎಷ್ಟು?*

ಆ) *ಪ್ರತಿ ತಿಂಗಳು ಈ ಕಛೇರಿಗಳಿಗೆ ನೀಡುತ್ತಿರುವ ಬಾಡಿಗೆ ಹಣ ಎಷ್ಟು?*

ಇ) *ಬಾಡಿಗೆ ಹಣ ಉಳಿಸುವ ಸಲುವಾಗಿ ಸೌತ್ ಬ್ಲಾಕ್ ಕಟ್ಟಡ ಹಾಗಿದ್ದಲ್ಲಿ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಸರ್ಕಾರ ತೀರ್ಮಾನಿಸಿದೆಯೇ?*

ಈ) *ಹಾಗಿದ್ದಲ್ಲಿ, ಎಷ್ಟು ಅಂತಸ್ತಿನ ಎಷ್ಟು ಕೋಟಿ ರೂ. ಅಂದಾಜು ವೆಚ್ಚದ ಕಟ್ಟಡ ನಿರ್ಮಾಣ ಕೈಗೊಳ್ಳಲಾಗುವುದು?*

ಶ್ರೀ ಧರ್ಮ್‌ಸಿಂಗ್ (ಲೋಕೋಪಯೋಗಿ ಸಚಿವರು) :

ಅ) 64

ಆ) ರೂ. 20,93,360-00 ಗಳು

ಇ) ಸೌತ್ ಬ್ಲಾಕ್ ಕಟ್ಟಡ ನಿರ್ಮಾಣದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಪರಿಶೀಲನೆಯಲ್ಲಿದೆ.

ಈ) ಮೂರು ತಳ ಮಹಡಿ, ನೆಲಮಹಡಿ ಹಾಗೂ ನಾಲ್ಕು ಮೇಲ್ ಮಹಡಿಗಳನ್ನೊಳಗೊಂಡ ಕಟ್ಟಡಕ್ಕೆ ರೂ. 100.00 ಕೋಟಿಗಳ ಅಂದಾಜು ಪಟ್ಟಿ ತಯಾರಿಸಲಾಗಿದೆ.

ರಾಜ್ಯದ ಯೋಜನಾ ಗಾತ್ರವನ್ನು ನಿರ್ಧರಿಸುವುದರ ಕುರಿತು

3135 - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *2000-2001ನೇ ಸಾಲಿಗೆ ಕೇಂದ್ರ ಯೋಜನಾ ಆಯೋಗವು ರಾಜ್ಯದ ಯೋಜನಾ ಗಾತ್ರವನ್ನು ನಿರ್ಧರಿಸಿದೆಯೇ?*

ಆ) *ಹಾಗಿದ್ದಲ್ಲಿ, ಮೇಲ್ಕಂಡ ಸಾಲಿಗೆ ರಾಜ್ಯದ ಯೋಜನಾ ಗಾತ್ರವೆಷ್ಟು?*

ಇ) *ಕಳೆದ ಸಾಲಿಗಿಂತ ಇದು ಶೇಕಡ ಎಷ್ಟು ಹೆಚ್ಚಾಗಿದೆ?*

ಶ್ರೀಮತಿ ಸುಮಾ ವಸಂತ್ (ಯೋಜನಾ ರಾಜ್ಯ ಸಚಿವರು) :

ಅ) ನಿರ್ಧರಿಸಿದೆ.